**ಸುಬೋಧ್ ಯಾದವ್**, ಭಾ.ಆ.ಸೇ.,
ವ್ಯವಸ್ಥಾಪಕರ ನಿರ್ದೇಶಕರು
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ

2ನೇ ಮಹಡಿ, ಜಿಲ್ಲಾಧಿಕಾರಿಗಳ ಕಛೇರಿ ಕಟ್ಟಡ, ಬೆಂಗಳೂರು ಜಿಲ್ಲೆ,
ಕೆಂಪೇಗೌಡ ರಸ್ತೆ, ಬೆಂಗಳೂರು – 560 009.

ಸಂ.ಕೆ.ಪಿ.ಎಲ್.ಸಿ/ಆಡಳಿತ/ಸಿಆರ್/192/15-16 ದಿನಾಂಕ: 01.06.2015

(1 to 12)

ವಿಷಯ: ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರಿಗೆ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ.

ಓದಲಾಗಿದೆ 1) ಸರ್ಕಾರದ ಆದೇಶ ಸಂಖ್ಯೆ: ಆರ್ 388 ಎಲ್‌ಜಿಬಿ 2008, ದಿ:29.08.2008

2) ಸರ್ಕಾರದ ಅದೇಶ ಸಂಖ್ಯೆ ಆರ್.ಡಿ 388 ಎಲ್.ಜಿ.ಬಿ. 2008 ದಿನಾಂಕ: 04.11.2009.

*******

ಉಲ್ಲೇಖ(1)ರ ದಿ:29.08.2008ರ ಸರ್ಕಾರದ ಆದೇಶದಂತೆ ಬೆಂಗಳೂರು ನಗರ ಜಿಲ್ಲೆಯೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸರ್ಕಾರಿ ಜಮೀನನ್ನು ಸಂರಕ್ಷಿಸಲು, ಅವಶ್ಯವಿದ್ದಲ್ಲಿ ಅಭಿವೃದ್ಧಿಪಡಿಸಲು ಮತ್ತು ಅವುಗಳನ್ನು ಸ್ಪರ್ಧಾತ್ಮಕವಾಗಿ ವಿಲೇ ಮಾಡಿ ಸಂಪನ್ಮೂಲಗಳನ್ನು ಸಂಗ್ರಹಿಸಲು ಹಾಗೂ ಹಂಚಿಕೆ ಮಾಡಲು ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತವನ್ನು ಸ್ಥಾಪಿಸಲು ಸರ್ಕಾರದ ಅನುಮೋದನೆ ನೀಡಿದ್ದು, ಇದರ ಅನ್ವಯ ಸದರಿ ನಿಗಮವು ದಿನಾಂಕ: 01.12.2008 ರಂದು ನೊಂದಾಯಿತವಾಗಿ ಕಾರ್ಯ ನಿರ್ವಹಿಸುತ್ತಿದೆ.

ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ಮೆಮೊರ್‍ಯಾಂಡಮ್ ಆಫ್ ಅಸೋಸಿಯೇಷನ್ ಮತ್ತು ಆರ್ಟಿಕಲ್ ಆಫ್ ಅಸೋಸಿಯೇಷನ್‌ನ ಒಂದು ಪ್ರತಿಯನ್ನು ಸಿದ್ದಮಾಹಿತಿಗಾಗಿ ಈ ಪತ್ರದೊಂದಿಗೆ ಲಗತ್ತಿಸಿದೆ. ಇದರ ಅನ್ವಯ ಸರ್ಕಾರಿ/ಶಾಸನಾತ್ಮಕ ಸಂಸ್ಥೆಗೆಗಳಿಗೆ ಸೇರಿದ ಜಮೀನುಗಳ ವ್ಯವಹರಣೆ ಮಾಡುವುದು, ಅಭಿವೃದ್ಧಿಪಡಿಸಿ ಉಪಯುಕ್ತವಾಗಿ ಬಳಸುವುದು, ಮುಂತಾದವು ಮುಖ್ಯ ಧ್ಯೇಯೊದ್ದೇಶಗಳಾಗಿರುತ್ತವೆ. ಇದರೊಂದಿಗೆ ಸರ್ಕಾರಿ ಜಮೀನುಗಳ ದತ್ತಾಂಶ ಕ್ರೋಢೀಕರಣ, ಒತ್ತುವರಿಯಿಂದ ಹಿಂಪಡೆದ ಜಮೀನುಗಳನ್ನು ವಿವಿಧ ಇಲಾಖೆಗಳಿಗೆ ಹಂಚಿಕೆ ಮಾಡುವುದು, ಒತ್ತುವರಿಯಾಗದಂತೆ ರಕ್ಷಣಾತ್ಮಕ ಕ್ರಮಗಳನ್ನು ಕೈಗೊಳ್ಳುವುದು ಮುಂತಾದವುಗಳು ಉಪ ಧ್ಯೇಯೊದ್ದೇಶಗಳಾಗಿರುತ್ತವೆ.

ಈ ಪ್ರಕ್ರಿಯೆಗಳು ಒತ್ತುವರಿ ಗುರುತಿಸುವುದು, ಒತ್ತುವರಿ ತೆರವುಗೊಳಿಸುವುದು, ಒತ್ತುವರಿಯಿಂದ ಹಿಂಪಡೆದ ಜಮೀನುಗಳನ್ನು ರಕ್ಷಿಸುವುದು, ತದನಂತರ ಅಭಿವೃದ್ಧಿಪಡಿಸುವುದು ಹಾಗೂ ಸರ್ಕಾರಕ್ಕೆ ರಾಜಸ್ವ ಉತ್ಪತ್ತಿಯಾಗುವಂತಹ ಯೋಜನೆಗಳನ್ನು ಅನುಷ್ಠಾನಗೊಳಿಸುವುದು ಒಳಗೊಂಡಿರುತ್ತವೆ. ಒತ್ತುವರಿ ಗುರುತಿಸುವುದು ಹಾಗೂ ತೆರವು ಪ್ರಕ್ರಿಯೆಗಳನ್ನು ಕ್ಷೇತ್ರ ಮಟ್ಟದದಲ್ಲಿ

ನಿರ್ವಹಿಸುತ್ತಿದ್ದಾರೆ. ಜಿಲ್ಲಾಧಿಕಾರಿಗಳಿಂದ ಬಂದಿರುವ ಮಾಹಿತಿಗಳ ಅನ್ವಯ ಒಟ್ಟು 4.54 ಲಕ್ಷ ಎಕರೆ ನೇರ ಒತ್ತುವರಿಯನ್ನು ಗುರುತಿಸಲಾಗಿದ್ದು, ಇದುವರೆಗೆ ಅಂದರೆ 30.04.2015ರ ಅಂತ್ಯಕ್ಕೆ 1.19 ಲಕ್ಷ ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗಿರುತ್ತದೆ. ಸರಾಸರಿ ಒಂದು ತಿಂಗಳಿಗೆ ಸುಮಾರು 10 ರಿಂದ 12 ಸಾವಿರ ಎಕರೆ ಒತ್ತುವರಿಯನ್ನು ತೆರವುಗೊಳಿಸಲಾಗುತ್ತಿದೆ. ಬಾಕಿ ಇರುವ 3.35 ಲಕ್ಷ ಎಕರೆ ಒತ್ತುವರಿಯನ್ನು ಇನ್ನಷ್ಟು ಶೀಘ್ರವಾಗಿ ತೆರವುಗೊಳಿಸಬೇಕಾಗಿರುತ್ತದೆ. ಇದಲ್ಲದೆ, ನ್ಯಾಯಲಯ ಪ್ರಕರಣಗಳಲ್ಲಿ ಒಳಗೊಂಡಿರುವ ಸರ್ಕಾರಿ ಜಮೀನುಗಳು, ನಿಯಮ ಬಾಹಿರವಾಗಿ ಸಕ್ರಮಗೊಳಿಸಿರುವ ಪ್ರಕರಣಗಳು, ಬಾಕಿ ಇರುವ ಸಕ್ರಮೀಕರಣ ಅರ್ಜಿಗಳ ಶೀಘ್ರ ವಿಲೇವಾರಿ ಮುಂತಾದ ಪ್ರಕ್ರಿಯೆಗಳನ್ನು ತೀವ್ರಗೊಳಿಸಬೇಕಾಗಿರುತ್ತದೆ. ಅದಕ್ಕಾಗಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದ ವ್ಯವಸ್ಥಾಪಕ ನಿರ್ದೇಶಕರಿಗೆ ಈ ಮುಂದಿನ ಅಧಿಕಾರ ಮತ್ತು ಕರ್ತವ್ಯಗಳನ್ನು ನೀಡಿ ಸೂಕ್ತ ಸರ್ಕಾರಿ ಆದೇಶ ಹೊರಡಿಸುವುದು ಅತ್ಯಾವಶ್ಯಕವಾಗಿರುತ್ತದೆ.

1. ಕರ್ನಾಟಕ ರಾಜ್ಯಾದ್ಯಾಂತ ಸರ್ಕಾರಿ ಜಮೀನುಗಳ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಸಂಬಂಧಪಟ್ಟ ಕಂದಾಯ ಆದಿಕಾರಿಗಳಿಗೆ ಸೂಚನೆ ನೀಡುವುದು ಮತ್ತು ಈ ಕಾರ್ಯದಲ್ಲಿ ಮೇಲ್ವಿಚಾರಣೆ ಮಾಡುವುದು.
2. ಸರ್ಕಾರಿ ಜಮೀನುಗಳ ಸಂರಕ್ಷಣೆ ಮತ್ತು ಅಭಿವೃದ್ಧಿಪಡಿಸುವ ಬಗ್ಗೆ ಮೇಲ್ವಿಚಾರಣೆ ಹಾಗೂ ಈ ನಿಟ್ಟಿನಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ಸೂಚನೆ/ನಿರ್ದೇಶನಗಳನ್ನು ನೀಡುವುದು ಹಾಗೂ ಒತ್ತುವರಿ ಗುರುತಿಸಿ, ತೆರವುಗೊಳಿಸುವ ಬಗ್ಗೆ ಜಿಲ್ಲಾ ಮಟ್ಟದ ಅಧಿಕಾರಿಗಳಿಂದ ಕ್ರಿಯಾ ಯೋಜನೆ ರೂಪಿಸಿ ಅದನ್ನು ಅನುಷ್ಠಾನಗೊಳಿಸುವ ಪೂರ್ಣ ಅಧಿಕಾರ.
3. ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸುವ ಬಗ್ಗೆ ಕಂದಾಯ ಇಲಾಖೆ ಸಿಬ್ಬಂಧಿಗೆ ಅಗತ್ಯ ಮೂಲ ಭೂತ ಸೌಲಭ್ಯಗಳನ್ನು ನೀಡುವ ಬಗ್ಗೆ ನಿರ್ಣಯಗಳನ್ನು ಕೈಗೊಳ್ಳುವುದು.
4. ಸರ್ಕಾರಿ ಜಮೀನುಗಳನ್ನು ಹರಾಜು ಮಾಡುವುದು/ಮಾರಾಟ ಮಾಡುವುದು/ಗುತ್ತಿಗೆಗೆ ನೀಡುವುದು ಅಥವ ಇನ್ಯಾವುದೇ ರೀತಿಯಲ್ಲಿ ವ್ಯವಹರಣೆ ಮಾಡುವ ಬಗ್ಗೆ ನಿರ್ಣಯಿಸುವುದು.
5. ಸರ್ಕಾರಿ ಜಮೀನುಗಳ ಒತ್ತುವರಿ ತೆರವು ಮಾಡುವುದು ಮತ್ತು ಹರಾಜು/ಮಾರಾಟ ಮಾಡುವುದು/ಗುತ್ತಿಗೆಗೆ ನೀಡುವುದು ಅಥವ ಇನ್ಯಾವುದೇ ರೀತಿಯಲ್ಲಿ ವ್ಯವಹರಣೆ ಮಾಡುವಲ್ಲಿ ಉಂಟಾಗುವ ವೆಚ್ಚಗಳ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಸರ್ಕಾರದ ಮಂಜೂರಾತಿ ಆದ ಮೇಲೆ ಸದರಿ ವೆಚ್ಚಗಳನ್ನು ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಪಾವತಿಸುವ ಪೂರ್ಣ ಅಧಿಕಾರ.
6. ಸರ್ಕಾರಿ ಜಮೀನುಗಳ ಒತ್ತುವರಿ ಬಗ್ಗೆ ವಿವಿಧ ಜಿಲ್ಲೆಗಳ ಸಮೀಕ್ಷಾ ಕಾರ್ಯವನ್ನು ಕೈಗೊಳ್ಳಲು ಅಗತ್ಯ ನಿರ್ಣಯಗಳನ್ನು ಕೈಗೊಳ್ಳುವುದು ಹಾಗೂ ಅದನ್ನು ಜಿಲ್ಲಾ ಮಟ್ಟದ ಅಧಿಕಾರಿಗಳ ಅನುಷ್ಠಾನಗೊಳಿಸಿ ಕಾಲಕಾಲಕ್ಕೆ ಸರ್ಕಾರಕ್ಕೆ ವರದಿ ಸಲ್ಲಿಸುವುದು. ಒತ್ತುವರಿ ತೆರವು ಕಾರ್ಯ ಅನುಷ್ಠಾನದ ಬಗ್ಗೆ ನಿಗದಿತ ನಮೂನೆಗಳಲ್ಲಿ ನಿಗಮಕ್ಕೆ ವರದಿಗಳನ್ನು ತರಿಸಿಕೊಳ್ಳುವ ಪೂರ್ಣ ಅಧಿಕಾರ.
7. ಸರ್ಕಾರಿ ಜಮೀನುಗಳಿಗೆ ಸಂಬಂಧಪಟ್ಟಂತೆ ದಾಖಲಾಗಿರುವ ನ್ಯಾಯಾಲಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಸರ್ಕಾರಿ ವಕೀಲರನ್ನು ನೇಮಿಸುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಸರ್ಕಾರಿ ವಕೀಲರಿಗೆ ಪ್ರಕರಣಕ್ಕೆ

ಸಂಬಂಧಪಟ್ಟ ಅಗತ್ಯ ಮಾಹಿತಿಗಳನ್ನು ಸರ್ಕಾರಿ ವಕೀಲರಿಗೆ ಒದಗಿಸುವ ಪೂರ್ಣ ಅಧಿಕಾರ ಹಾಗೂ ನಿಗಮದ ಪರವಾಗಿ ಖಾಸಗಿ ವಕೀಲರನ್ನು ನೇಮಕ ಮಾಡಿಕೊಳ್ಳುವ ಪೂರ್ಣ ಅಧಿಕಾರ.

8. ಸರ್ಕಾರಿ ಜಮೀನುಗಳ ಒತ್ತುವರಿ ತೆರವು/ಸಂರಕ್ಷಣೆ/ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮದಿಂದ ನೀಡಲಾದ ಸುತ್ತೋಲೆ/ಸೂಚನೆ/ನಿರ್ದೇಶನಗಳನ್ನು ಪಾಲಿಸದೇ ವಿಫಲರಾಗುವುವ ಅಧಿಕಾರಿಗಳ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸುವ ಪೂರ್ಣ ಅಧಿಕಾರ.
9. ಸರ್ಕಾರಿ ಜಮೀನು ಒತ್ತುವರಿ ಬಗ್ಗೆ ಸ್ವೀಕೃತವಾಗುವ ದೂರುಗಳ ಬಗ್ಗೆ ಪರಿಶೀಲನೆ ಮಾಡಿ ಮುಂದಿನ ಅಗತ್ಯ ಕ್ರಮಗಳನ್ನು ಕೈಗೊಂಡು ದೂರುಗಳನ್ನು ಇತ್ಯರ್ಥಪಡಿಸಲು ಸಂಬಂಧಪಟ್ಟ ಅಧಿಕಾರಿಗಳಿಗೆ ನಿರ್ದೇಶನ ನೀಡುವುದು.
10. ಸರ್ಕಾರಿ ಜಮೀನುಗಳ ಒತ್ತುವರಿ ತೆರವುಗೊಳಿಸಲು, ಸಂರಕ್ಷಿಸಲು, ಅಭಿವೃದ್ಧಿಗೊಳಿಸಲು ಹಾಗೂ ವಿಲೇವಾರಿ ಮಾಡುವ ನಿಟ್ಟಿನಲ್ಲಿ ಅಗತ್ಯವಾದ ಎಲ್ಲಾ ಅಗತ್ಯ ಕ್ರಮ ಜರುಗಿಸುವ ಬಗ್ಗೆ ಪೂರ್ಣ ಅಧಿಕಾರ.

ಮೇಲೆ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಪ್ರಸ್ತುತ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ ಇವರು ಸರ್ಕಾರಿ ಜಮೀನು ಒತ್ತುವರಿ ತೆರವು, ಸಂರಕ್ಷಣೆ ಹಾಗೂ ಅಭಿವೃದ್ಧಿ ಪಡಿಸುವ ಎಲ್ಲಾ ಪ್ರಕ್ರಿಯೆಗಳನ್ನು ಇನ್ನಷ್ಟು ಚುರುಕುಗೊಳಿಸುವುದು ಹಾಗು ಪರಿಣಾಮಕಾರಿಯಾಗಿ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ, ಸದರಿ ಹುದ್ದೆಯ ಅಧಿಕಾರ ಹಾಗೂ ಕರ್ತವ್ಯಗಳನ್ನು ಮೇಲ್ಕಂಡಂತೆ ನಿಗದಿಪಡಿಸಿ ಸೂಕ್ತ ಸರ್ಕಾರಿ ಅದೇಶ ಹೊರಡಿಸಲು ಕೋರಿದೆ.

ತಮ್ಮ ವಿಶ್ವಾಸಿ,
ಸಹಿ/-
ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ, ನಿ

**ಡಾ:ಬಿ.ಬಸವರಾಜು, ಭಾ.ಆ.ಸೇ.,**
ಸರ್ಕಾರದ ಪ್ರಧಾನ ಕಾಯದರ್ಶಿಗಳು,
ಕಂದಾಯ ಇಲಾಖೆ,
ಬಹು ಮಹಡಿಗಳ ಕಟ್ಟಡ,
ಬೆಂಗಳೂರು.

ಪ್ರತಿಯನ್ನು ಮಾನ್ಯ ಕಂದಾಯ ಸಚಿವರ ಆಪ್ತ ಕಾರ್ಯದಶಿಯವರು, ವಿಧಾನ ಸೌಧ, ಬೆಂಗಳೂರು ರವರಿಗೆ ಕಳುಹಿಸುತ್ತಾ, ಸದರಿ ವಿಚಾರವನ್ನು ಮಾನ್ಯ ಕಂದಾಯ ಸಚಿವರ ಅವಗಾಹನೆಗೆ ತರಲು ಕೋರಿದೆ.

1.6.15

ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಸಾರ್ವಜನಿಕ ಜಮೀನುಗಳ ನಿಗಮ ನಿಯಮಿತ,